*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್ ಘಟಕ, ಬೆಂಗಳೂರು*

***(58ನೇ ನಗರ ಸಿವಿಲ್ ನ್ಯಾಯಾಂಗಣ)***

*ದಿನಾಂಕಃ 12ನೇ ಮಾಹೆ ಮಾರ್ಚ್, 2020*

*-ಃ ಉಪಸ್ಥಿತರು ಃ-*

*ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್‌ಎಲ್.ಎಂ.,*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು.*

*ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆಃ25128/2020*

ಅರ್ಜಿದಾರಳುಃ ಶ್ರೀಮತಿ ಲಲಿತಾ ವೆಂಕಟೇಶ್ ಕೋಂಃ ಆರ್. ವೆಂಕಟೇಶ್,
ಸುಮಾರು 45 ವರ್ಷ, ವಾಸಃ ಹೊಸ ನಂ.ಇ/161,
ಹಳೆ ನಂ.19, ಟಿ.ಟಿ.ಕೆ. ಫ್ಯಾಕ್ಟರಿ ಹಿಂಭಾಗ,
ಶಕ್ತಿ ನಗರ, ಬೆಂಗಳೂರು ಉತ್ತರ,
ದೂರವಾಣಿನಗರ, ಬೆಂಗಳೂರು - 560016.

(ಪರವಾಗಿ ಶ್ರೀ ಜಿ.ಎಸ್.ಪ್ರಸಾದ್ ರೆಡ್ಡಿ, ವಕೀಲರು)

- ವಿರುದ್ಧ -

ಎದುರುದಾರರುಃ ರಾಜ್ಯದ ಪರವಾಗಿ ಬಾಣಸವಾಡಿ ಪೊಲೀಸ್ ಠಾಣೆ,
ಬೆಂಗಳೂರು ನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿ, ಬೆಂಗಳೂರು, ಮೆಯೋಹಾಲ್ ಘಟಕದ 11ನೇ

ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದಲ್ಲಿ ಉಳಿದ ಆರೋಪಿಗಳ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 04/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 419, 420, 467, 468, 504, 506(ಬಿ), 120(ಬಿ)ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾಳೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ಅರ್ಜಿದಾರಳು ತಾನು ಅಮಾಯಕಳಿದ್ದು, ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಬಹುದೆಂದು, ಮೇಲ್ನೋಟಕ್ಕೆ ತನ್ನ ವಿರುದ್ಧ ಯಾವುದೇ ಆಪಾದನೆಗಳು ಕಂಡು ಬರುತ್ತಿಲ್ಲವೆಂದೂ ಹಾಗೂ ತನ್ನ ಹೆಸರನ್ನು ಹಾಳು ಮಾಡಬೇಕು ಎಂಬ ದುರುದ್ದೇಶದಿಂದ ತನ್ನ ವಿರುದ್ಧ ಸುಳ್ಳು ದೂರನ್ನು ನೀಡಬಹುದೆಂದೂ, ಆರೋಪಿಸಬಹುದಾದಂತಹ ಅಪರಾಧಗಳು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಲ್ಲವೆಂದೂ, ತಾನು ಕಾನೂನು ಪರಿಪಾಲನೆ ಮಾಡುವ ನಾಗರಿಕಳಿದ್ದು, ತನಿಖೆಗೆ ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ತಾನು ಸಿದ್ಧಳಿದ್ದೇನೆಂದೂ, ತನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ, ತುಂಬಲಾರದ ತೊಂದರೆ ಉಂಟಾಗುತ್ತದೆ ಎಂದು ಹೇಳಿ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾಳೆ.

3. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಅರ್ಜಿದಾರಳು ಗುನ್ನೆಯಾದಾಗಿನಿಂದಲೂ ತನಿಖೆಗೆ ಲಭ್ಯವಿಲ್ಲದೇ ಪರಾರಿಯಲ್ಲಿದ್ದು, ಪ್ರಕರಣವು ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ತನಿಖೆಯನ್ನು ಕೈಗೊಳ್ಳಬೇಕಾಗಿರುತ್ತದೆ ಎಂದೂ, ಈ ಹಂತದಲ್ಲಿ ಆಕೆಯನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ ಹಾಗೂ ಪುನಃ ಪರಾರಿಯಾಗುವ ಸಾಧ್ಯತೆಗಳಿವೆ ಎಂದು ಹೇಳಿ, ತನಿಖಾ ವರದಿಯನ್ನು ಪರಿಗಣಿಸುವಂತೆ ವಿನಂತಿಸಿ, ಆಕೆಯ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದ ವಿವಾದವನ್ನು ಆಲಿಸಲಾಯಿತು.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇ:-

i) ಅರ್ಜಿದಾರಳು ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹಳಿದ್ದಾಳೆಯೇ?

ii) ಏನು ಆದೇಶ?

6. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ:-

ಅಂಶ i) : ನಕಾರಾತ್ಮಕವಾಗಿ

ಅಂಶ ii) : ಅಂತಿಮ ಆದೇಶದಂತೆ, ಈ ಕೆಳಕಂಡಂತೆ:

## ಕಾ ರ ಣ ಗ ಳು:

7. ಅಂಶ i): ಅರ್ಜಿದಾರಳು, ತಾನು ಈ ಪ್ರಕರಣದಲ್ಲಿ ಆರೋಪಿಸಬಹುದಾದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಬಹುದೆಂದು, ತಾನು ಕಾನೂನು ಪರಿಪಾಲನೆ ಮಾಡುವ ನಾಗರಿಕಳಿದ್ದು, ತನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದು ಹೇಳಿ, ತನ್ನನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾಳೆ. ಅರ್ಜಿದಾರಳು ಪರ ವಕೀಲರು, ಅರ್ಜಿದಾರಳ ವಿರುದ್ಧ ಯಾವುದೇ ಅಪಾದನೆಗಳು ಕಂಡು ಬರುತ್ತಿಲ್ಲವೆಂದೂ, ಆ ಕಾರಣ ಆಕೆಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕೆಂದು ವಾದಿಸಿದ್ದಾರೆ. ಇತರ ಆರೋಪಿಗಳು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ವ್ಯಕ್ತಿ ಮತ್ತು ಮಹಿಳೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಪಿರ್ಯಾದಿದಾರರಿಗೆ ಮೋಸ ಮಾಡಲು ಬೇರೆಯವರಿಗೆ ಸೇಲ್ ಅಗ್ರಿಮೆಂಟ್ ಅನ್ನು ಮಾಡಿರುತ್ತಾರೆ, ಅರ್ಜಿದಾರಳಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದಲ್ಲಿ ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ, ಪುನಃ ಇಂತಹದೇ ಕೃತ್ಯಗಳನ್ನು ಎಸಗುವ ಹಾಗೂ ಪರಾರಿಯಾಗುವ ಸಾಧ್ಯತೆಗಳಿರುವ ಕಾರಣ, ಆಕೆಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು ಎಂದು ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

8. ಪಿರ್ಯಾದಿದಾರರು ಮತ್ತು ಅವರ ಪತ್ನಿ ಶ್ರೀಮತಿ ಯಾಮಿನಿರವರು ಹೆಚ್.ಆರ್.ಬಿ.ಆರ್. ಲೇಔಟ್ 1ನೇ ಬ್ಲಾಕ್ ಇಲ್ಲಿನ ಸೈಟ್ ನಂಬರ್10-ಎಮ್265ರ

ನಿವೇಶನವನ್ನು ಖರೀದಿಸಿದ್ದು, ಅದು ಬಿ.ಡಿ.ಎಗೆ ಸೇರಿದ್ದು, 1ನೇ ಆರೋಪಿ ಗೌರಮ್ಮ ಹಾಗೂ ಮತ್ತಿತ್ತರರು ಸೇರಿ ಪಿರ್ಯಾದಿದಾರರ ಪತ್ನಿ ಯಾಮಿನಿರವರಿಗೆ ರಿಲೀಸ್ ಡೀಡ್ ಅನ್ನು ದಿನಾಂಕ 25-07-2018ರಂದು ಮಾಡಿದ ಹಾಗೇ ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದು, ನಂತರ ಗೌರಮ್ಮ 2ನೇ ಆರೋಪಿ ಬತ್ತಿಸ್ ಎಂಬುವವರಿಗೆ ಸೇಲ್ ಅಗ್ರಿಮೆಂಟ್ ಮಾಡಿದ್ದು ಈ ಬಗ್ಗೆ ಪಿರ್ಯಾದಿದಾರರು ಆರೋಪಿಗಳಿಗೆ ಸ್ಥಳದಲ್ಲಿ ಕೇಳಿದಾಗ ಉಳಿದ ಆರೋಪಿಗಳೊಂದಿಗೆ ಸೇರಿಕೊಂಡು ಬೈದು, ಪ್ರಾಣ ಬೆದರಿಕೆ ಹಾಕಿದ್ದು, ಅರ್ಜಿದಾರಳು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ವ್ಯಕ್ತಿ ಮತ್ತು ಮಹಿಳೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಪಿರ್ಯಾದಿದಾರರಿಗೆ ಮೋಸ ಮಾಡಲು ಬೇರೆಯವರಿಗೆ ಸೇಲ್ ಅಗ್ರಿಮೆಂಟ್ ಅನ್ನು ಮಾಡಿರುತ್ತಾರೆ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿರುತ್ತದೆ ಎನ್ನುವುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

9. ಅರ್ಜಿದಾರಳು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ವ್ಯಕ್ತಿ ಮತ್ತು ಮಹಿಳೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಪಿರ್ಯಾದಿದಾರರಿಗೆ ಮೋಸ ಮಾಡಲು ಬೇರೆಯವರಿಗೆ ಸೇಲ್ ಅಗ್ರಿಮೆಂಟ್ ಅನ್ನು ಮಾಡಿರುತ್ತಾರೆ ಎಂಬೆಲ್ಲ ಅಂಶಗಳು ಪಿರ್ಯಾದಿದಾರರ ದೂರು, ತನಿಖಾ ವರದಿ ಹಾಗೂ ಅಭಿಯೋಜಕರ ತಕರಾರಿನಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತಿದ್ದು, ಅರ್ಜಿದಾರಳು ಪಿರ್ಯಾದಿದಾರರನ್ನು ವಂಚಿಸಿರುವುದಿಲ್ಲ ಎಂಬ ಅಂಶಗಳನ್ನು ಅಲ್ಲಗಳೆಯುವಂತಹ ಯಾವುದೇ ಅಂಶ ಅರ್ಜಿದಾರಳ ಅರ್ಜಿಯಿಂದ ವ್ಯಕ್ತವಾಗುತ್ತಿಲ್ಲ. ಆದ್ದರಿಂದ, ಅರ್ಜಿದಾರಳು ಪಿರ್ಯಾದಿದಾರರು ಆರೋಪಿಸಿರುವಂತಹ ಕೃತ್ಯವನ್ನೆಸಗಿರುವುದು

ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಆದ್ದರಿಂದ, ಸರ್ಕಾರಿ ಅಭಿಯೋಜಕರು ವ್ಯಕ್ತಪಡಿಸಿರುವ ಆತಂಕಗಳನ್ನು ಪರಿಗಣಿಸಿ, ಅರ್ಜಿದಾರಳಿಗೆ ಈ ಹಂತದಲ್ಲಿ ನಿರೀಕ್ಷಣಾ ಜಾಮೀನು ಮಂಜೂರು ಮಾಡುವುದು ಸೂಕ್ತವಲ್ಲ ಎಂಬ ಅಭಿಪ್ರಾಯಕ್ಕೆ ಬಂದು ಮೇಲಿನ ಅಂಶ ಒಂದನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. ಅಂಶ ii): ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರಳಾದ ಲಲಿತ ವೆಂಕಟೇಶ್ ಈಕೆಯ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಲಾಗಿದೆ.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 12ನೇ ಮಾಹೆ ಮಾರ್ಚ್ 2020ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ)*

*(ಬಾಬಾಸಾಹೇಬ್ ಎಲ್. ಜಿನರಾಳ್ಕರ್),*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*

**ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.**

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರಳಾದ ಲಲಿತ ವೆಂಕಟೇಶ್ ಈಕೆಯ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಲಾಗಿದೆ.

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*